ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 24ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2006ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2006ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ಎರಡು ನಿಮಿಷ. ನಿರುದ್ಯೋಗಿ ಯುವಕರ ಪರವಾಗಿ ಇರುವ ಸಮಸ್ಯೆ ಕುರಿತಂತೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುವ ಒಂದು ವಿಷಯವಿದೆ.

ಅಧ್ಯಕ್ಷರು : ಬಿಲ್ಸ್ ಇವೆ. ಅದಾದ ನಂತರ ನೀವು ಮಾತನಾಡಿ.

(ಆ) ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ದತಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2005

ಪರಿಯಾಲೋಚನಾ ಪ್ರಸ್ತಾವ

ಶ್ರೀ ಬಿ. ನಾಗರಾಜಶೆಟ್ಟಿ (ಮೀನುಗಾರಿಕೆ ಬಂದರು ಮತ್ತು ಮುಜರಾಯಿ ಸಚಿವರು) : ಮಾನ್ಯ ಅಧ್ಯಕ್ಷರೆ, "2005ರ ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ದತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ

ಪ್ರಸ್ತಾವ ಮಂಡಿಸಲಾಯಿತು

ಶ್ರೀ ಬಿ.ನಾಗರಾಜಶೆಟ್ಟಿ ಮಾನ್ಯ ಅಧ್ಯಕ್ಷರೆ 2005ರ ಮೈಸೂರು ಧಾರ್ಮಿಕ ಮತ್ತು ಧರ್ಮದಾಯ ಇನಾಂಗಳ ಈಗ ತಿದ್ದುಪಡಿ ತಂದಿರುವಂಥ ಉದ್ದೇಶವೇನೆಂದರೆ, ರಾಜ್ಯದಲ್ಲಿ ಧಾರ್ಮಿಕ ಸಂಸ್ಥೆಗಳು ಹೊಂದಿದ್ದ ಇನಾಮು ಜಮೀನುಗಳು Mysore Inam Abolition Act, 1955ರ ಕಲಂ 21ರ ಅನ್ವಯ ಸರ್ಕಾರದಲ್ಲಿ ಇನಾಮುದಾರ ಸಂಸ್ಥೆಗಳು ಇನಾಮು ಜಮೀನುಗಳಿಗೆ ತಸ್ಥಿಕ್ ನಿಗದಿಪಡಿಸುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇರುತ್ತದೆ. 1955ರ ಇನಾಂ ರದ್ದತಿ ಕಾಯ್ದೆಯ ಕಲಂ 15ರ ಅನ್ವಯ ಸದರಿ ಜಮೀನುಗಳು ಸರ್ಕಾರದಲ್ಲಿ ವಿಲೀನಗೊಂಡ ದಿನಾಂಕದಿಂದ ಹಿಂದಿನ ಐದು ವರ್ಷಗಳ ಸರಾಸರಿ ಹಕ್ಕು ಪತ್ರಗಳನ್ನು ಗಣನೆಗೆ ತೆಗೆದುಕೊಂಡು ವಾರ್ಷಿಕ ಆದಾಯವನ್ನು ನಿಗದಿಪಡಿಸಬೇಕಾಗುತ್ತದೆ. ಆದರೆ, ಜಿಲ್ಲಾಧಿಕಾರಿಗಳು ನಿಗದಿಪಡಿಸುವ ತಸ್ಥಿಕ್ ಮೊತ್ತವನ್ನು ಪರಿಷ್ಕರಿಸುವ, ಮರು ನಿಗದಿಪಡಿಸುವ ಅಧಿಕಾರ ಸೆಕ್ಷನ್ 21(ಎ) ಅನ್ವಯ ವಿಭಾಗಾಧಿಕಾರಿಗಳಿಗೆ ಇತ್ತು. ಆದರೆ, ವಿಭಾಗಾಧಿಕಾರಿಗಳ ಹುದ್ದೆಯು ಕರ್ನಾಟಕ ಲ್ಯಾಂಡ್ ರೆವಿನ್ಯೂ ಆ್ಯಕ್ಟ್ 2002ರ ಅನ್ವಯ ರದ್ದಾಗಿದೆ. ಆ ದೃಷ್ಟಿಯಿಂದ 1955ರ ಇನಾಂ ರದ್ದತಿ ಕಾಯ್ದೆಯ ಸೆಕ್ಷನ್‌ನಲ್ಲಿ ತಿಳಿಸಿರುವಂತೆ ಜಿಲ್ಲಾಧಿಕಾರಿಗಳು ಇನಾಮುದಾರ ಸಂಸ್ಥೆಗಳ ಇನಾಮು ಜಮೀನುಗಳನ್ನು ನಿಗದಿಪಡಿಸುವ ತಸ್ಥಿಕ್ ಮೊತ್ತವನ್ನು ವಿಭಾಗಾಧಿಕಾರಿಗಳು ಮರು ಪರಿಷ್ಕರಿಸುವ, ನಿಗದಿಪಡಿಸುವ ತಸ್ಥಿಕ್ ಮೊತ್ತವನ್ನು ಸರ್ಕಾರ ಪುನರ್ ಅವಲೋಕನ ಮಾಡಲು ಅಧಿಕಾರ ಹೊಂದಲು ಉದ್ದೇಶಿಸಲಾಗಿದೆ. ಈ ಕಾರಣದಿಂದ ಸದರಿ ವಿಧೇಯಕಕ್ಕೆ ತಿದ್ದುಪಡಿ ತರಲಾಗುತ್ತಿದೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2005ರ ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ದತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಪ್ರಸ್ತಾವ ಏನೆಂದರೆ :

ಅಧ್ಯಕ್ಷರು : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ನಾಗರಾಜಶೆಟ್ಟಿ (ಬಂದರು, ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು): ಮಾನ್ಯ ಅಧ್ಯಕ್ಷರೆ, "2005ರ ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ದತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ 2005ರ ಮೈಸೂರು (ಧಾರ್ಮಿಕ ಮತ್ತು ಧರ್ಮದಾಯ) ಇನಾಂಗಳ ರದ್ದತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

*** ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು**

(ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಎರಡನೇ ತಿದ್ದುಪಡಿ) ವಿಧೇಯಕ, 2005 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "2005ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲಾಯಿತು

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಹೈಟೆಕ್ ನಗರ ವಿನ್ಯಾಸ ರೂಪಿಸುವುದು, ಸರ್ಜಾಪುರ ರಸ್ತೆ – ಹೊಸೂರು ರಸ್ತೆಗಳ ನಡುವೆ ರಸ್ತೆ ನಿರ್ಮಾಣಕ್ಕೆ ಸರ್ಕಾರದ ಆದೇಶ ಸಂಖ್ಯೆ : ಯುಡಿಎ 196 ಟಿಎಲ್ಎ2004 ದಿನಾಂಕ 23.12.2004ರಂತೆ ಯೋಜನೆಯನ್ನು ಜಾರಿಗೊಳಿಸುವುದಕ್ಕೆ ಏಕಕಾಲಿಕ ಕ್ರಮ ಎಂಬಂತೆ ಇಂತಹ ವಿಶೇಷ